ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ಇಂಡಿ.
ಇವರ ನ್ಯಾಯಾಲಯದಲ್ಲಿ.

ಸಿ.ಸಿ.ನಂ. : 4156/2022
ಪ್ರಾ.ಸಾ : 1

(ಈ ದಿವಸ ದಿನಾಂಕ 15.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲು ಶ್ರೀ ಎಸ್.ಎಲ್.ಬಿ., ವಕೀಲರಿಂದ ಆರೋಪಿತರ ಪರವಾಗಿ:</u>**

1) ಆರೋಪಿ ಮತ್ತು ನಾನು ಒಂದೇ ಗ್ರಾಮದವರಾಗಿದ್ದು, ನಾನು ಮತ್ತು ಆತನ ಸ್ನೇಹಿತನಾಗಿರುತ್ತೇವೆ. ನಾನು ನಿಂಬಾಳ ಗ್ರಾಮದವನಾಗಿರುತ್ತೇನೆ. ಆರೋಪಿಯು ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಕೆಲಸ ಮಾಡುತ್ತಾರೆ. ಆರೋಪಿಗೆ ಮಾಹೆಯಾನ ಸುಮಾರು ರೂ.50,000/- ಸಂಬಳ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2) ದಿನಾಂಕ 25.03.2022 ರಂದು ಆರೋಪಿಗೆ ನಾನು ರೂ.5,00,000/- ಹಣ ನೀಡಿರುತ್ತೇನೆ. ಸದರಿ ದಿನಾಂಕವನ್ನು ನನ್ನ ನೋಟೀಸಿನಲ್ಲಾಗಲಿ ಅಥವಾ ದೂರಿನಲ್ಲಾಗಲಿ ತಿಳಿಸಿಲ್ಲವೆಂದರೆ ಸರಿಯಲ್ಲ. ಸದರಿ ದಿನಾಂಕವನ್ನು ನಾನು ಆರೋಪಿಗೆ ಯಾವುದೇ ಹಣ ನೀಡದೇ ಇರುವ ಕಾರಣ ದೂರಿನಲ್ಲಿ ನಮೂದಿಸಿಲ್ಲವೆಂದರೆ ಸರಿಯಲ್ಲ.

3) ಆರೋಪಿಯ ಮಗನ ಮದುವೆಯು ದಿನಾಂಕ 27.03.2022 ರಂದು ಇದ್ದ ಕಾರಣ ಆತನು ನನ್ನಿಂದ ಹಣ ಪಡೆದಿರುತ್ತಾನೆ. ನಾನು ಒಂದೇ ಮೊತ್ತದಲ್ಲಿ ಐದು ಲಕ್ಷ ರೂಪಾಯಿಗಳನ್ನು ಆರೋಪಿಗೆ ನೀಡಿರುತ್ತೇನೆ. ನಾನು ರೂ.500/- ಮುಖಬೆಲೆಯ 10 ಬಂಡಲ್ ಗಳನ್ನು ಆರೋಪಿಗೆ ನನ್ನ ಮನೆಯಲ್ಲಿಯೇ ನೀಡಿರುತ್ತೇನೆ. ಹಣ ಪಡೆದುಕೊಳ್ಳುವ ಸಮಯದಲ್ಲಿ ಆರೋಪಿ ಮತ್ತು ಆತನ ಹೆಂಡತಿ ಇದ್ದರು ಹಾಗೂ ನಾನು, ನನ್ನ ಹೆಂಡತಿ-ಮಕ್ಕಳು ಇದ್ದೆವು.

4) ಆರೋಪಿಯು ನಮ್ಮ ಮನೆಗೆ ಬಂದು ಸಾಲ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ನಾನು ವೆಲ್ಡಿಂಗ ವರ್ಕ್ ಮಾಡುತ್ತೇನೆ. ನನಗೆ ತಿಂಗಳಿಗೆ ಸುಮಾರು ರೂ.25,000/- ಗಳ ಆದಾಯವಿದೆ. ಈ ವ್ಯವಹಾರಕ್ಕಿಂತಲೂ ಮುಂಚೆ ನನ್ನ ಮತ್ತು ಆರೋಪಿಯ ನಡುವೆ 2-3 ಬಾರಿ ಹಣದ ವ್ಯವಹಾರವಾಗಿದೆ. ಆರೋಪಿಯು ನನ್ನಿಂದ ಹಣ ಪಡೆದು

ಈ ಹಿಂದೆ ಸರಿಯಾಗಿ ವಾಪಸ್ಸು ಮಾಡುತ್ತಿದ್ದರು. ನಾನೇ ಆರೋಪಿಗೆ ಹಣ ನೀಡುತ್ತಿದ್ದೆ. ಈ ವ್ಯವಹಾರದ ಮುಂಚಿನ ವ್ಯವಹಾರಗಳಲ್ಲಿ ಆರೋಪಿಯಿಂದ ಚೆಕ್ಕು ಪಡೆದಿರಲಿಲ್ಲ. ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ಚೆಕ್ಕನ್ನು ಮಾತ್ರವೇ ಪಡೆದಿರುತ್ತೇನೆ.

6) ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುವುದಿಲ್ಲ ಹಾಗೂ ನನ್ನ ಬಳಿ ಲೇವಾದೇವಿ ಪರವಾನಗಿ ಇರುವುದಿಲ್ಲ. ಆರೋಪಿಯಿಂದ ಪ್ರಸ್ತುತ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಚೆಕ್ಕನ್ನು ಪಡೆದುಕೊಂಡಿದ್ದು, ಬೇರೆ ಯಾವುದೇ ದಾಖಲೆಗಳನ್ನು ಬರೆಸಿಕೊಂಡಿರುವುದಿಲ್ಲ. ನಾನು ಆರೋಪಿಗೆ ಹಣ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ನಾನು ದುಡ್ಡನ್ನು ಮರುಪಾವತಿ ಮಾಡುವಂತೆ ಆರೋಪಿಯ ಮನೆಯ ಬಳಿ ಕೇಳಲು ಹೋದಾಗ ಆರೋಪಿಯು ಚೆಕ್ ನೀಡಿರುತ್ತಾರೆ.

8) ನನ್ನ ವೆಲ್ಡಿಂಗ ಕೆಲಸ, ಜಮೀನಿನ ಆದಾಯದಿಂದ ಬಂದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಸದರಿ ಹಣವನ್ನು ನಾನು ಮನೆ ಮತ್ತು ಬ್ಯಾಂಕು ಎರಡೂ ಕಡೆ ಇಟ್ಟಿದ್ದೆ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತಿಲ್ಲ.

9) ಆರೋಪಿಯು ದಿನಾಂಕ 08.06.2022 ರ ದಿನಾಂಕವನ್ನು ನಮೂದಿಸಿ ಚೆಕ್ಕನ್ನು ನೀಡಿರುತ್ತಾರೆ. ದಿನಾಂಕ 07.06.2022 ರಂದು ಸಂಜೆ 6.00 ಘಂಟೆ ಸಮಯದಲ್ಲಿ ಆರೋಪಿಯು ಚೆಕ್ಕು ನೀಡಿರುತ್ತಾರೆ. ದಿನಾಂಕ 08.06.2022 ರಂದು ಚೆಕ್ ನೀಡಿದರೆಂದು ನನ್ನ ನೋಟೀಸಿನಲ್ಲಿ ನಮೂದಿಸಿರುವುದು ಸರಿ ಇರುತ್ತದೆ.

10) ನಾನು ಚೆಕ್ಕನ್ನು ದಿನಾಂಕ 08.06.2022 ರಂದು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಆರೋಪಿಯು ಚೆಕ್ಕಿನ ದಿನಾಂಕ ಮತ್ತು ವಿವರಗಳನ್ನು ನೀಡಿದ ಮಾಹಿತಿಯ ಪ್ರಕಾರ ನಾನು ಬರೆದಿರುತ್ತೇನೆ. ನಂತರ ಆರೋಪಿಯು ಸಹಿ ಮಾಡಿರುತ್ತಾನೆ. ಆರೋಪಿಯ ಕೈಬರವಣಿಗೆಯು ಸರಿ ಇಲ್ಲದೇ ಇರುವ ಕಾರಣ ನನಗೆ ಬರೆಯಲು ತಿಳಿಸಿರುತ್ತಾರೆ. ಆರೋಪಿಯ ಸಹಿ ಮತ್ತು ವಿವರದ ಶಾಹಿಯು ನಿ.ಪಿ.1 ಚೆಕ್ಕಿನಲ್ಲಿ ಬೇರೆ ಬೇರೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ

ಪೆನ್ನಿನನಲ್ಲಿ ನಾನು ವಿವರಗಳನ್ನು ಬರೆದಿದ್ದು, ಆರೋಪಿಯ ಪೆನ್ನಿನಲ್ಲಿ ಆತನು ಸಹಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ.

11) ಚೆಕ್ಕನ್ನು ಹಾಜರುಪಡಿಸಲು ಚಲನ್ ಅನ್ನು ನಾನೇ ಬ್ಯಾಂಕಿನಲ್ಲಿ ಬರೆದಿರುತ್ತೇನೆ. ನಿ.ಪಿ.2 ನ್ನು ಹೊರತುಪಡಿಸಿ ಬ್ಯಾಂಕಿನವರು ಬೇರೆ ದಾಖಲೆ ನೀಡಿರುವುದಿಲ್ಲ. ನಂತರ ಆರೋಪಿಯನ್ನು ಭೇಟಿ ಮಾಡಿದಾಗ ಅವರು ಉಡಾಫೆ ಉತ್ತರ ನೀಡಿದ ಕಾರಣ ನನ್ನ ವಕೀಲರ ಮೂಲಕ ನೋಟೀಸ್ ಜಾರಿಗೊಳಿಸಿರುತ್ತೇನೆ. ನೋಟೀಸಿನ ನಿಖರವಾದ ದಿನಾಂಕವನ್ನು ಹೇಳಲು ಆಗುವುದಿಲ್ಲ. ಆರೋಪಿಯು ನಾನು ನೋಟೀಸಿನಲ್ಲಿ ತಿಳಿಸಿರುವ ಸಂಗತಿಗಳನ್ನು ಅಲ್ಲಗಳೆದು ಜವಾಬು ನೀಡಿರುತ್ತಾರೆ. ಉಳಿದ ಸಂಗತಿಗಳು ಗೊತ್ತಿಲ್ಲ.

12) ಶ್ರೀಮತಿ ರೇಣುಕಾ ಆರ್. ಬಡಿಗೇರ ಎಂಬುವವರು ನನ್ನ ತಮ್ಮನ ಹೆಂಡತಿ. ಅವರ ವಿವಾಹವು ಸನ್ 2013 ರಲ್ಲಿ ನನ್ನ ತಮ್ಮನ ಜೊತೆ ಆಗಿರುತ್ತದೆ. ನಿಖರವಾದ ದಿನಾಂಕ ಗೊತ್ತಿಲ್ಲ. ಶ್ರೀಮತಿ ರೇಣುಕಾ ಆರ್. ಬಡಿಗೇರ ಅವರೂ ಸಹ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ರಾಯಚೂರು ಜಿಲ್ಲೆಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿ ಮತ್ತು ನನ್ನ ನಾದಿನಿಯಾದ ಶ್ರೀಮತಿ ರೇಣುಕಾ ಆರ್. ಬಡಿಗೇರ ಅವರು ಪರಸ್ಪರ ವರ್ಗಾವಣೆ ಕೋರಿ ಅರ್ಜಿ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ರೀಮತಿ ರೇಣುಕಾ ಆರ್. ಬಡಿಗೇರ ಮತ್ತು ಆರೋಪಿಯ ನಡುವೆ ಏನು ವ್ಯವಹಾರವಾಗಿದೆ ಎಂದು ನನಗೆ ಗೊತ್ತಿಲ್ಲ. ಅವರಿಬ್ಬರ ವ್ಯವಹಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಪರಸ್ಪರ ವರ್ಗಾವಣೆಯ ಸಂಬಂಧ ಶ್ರೀಮತಿ ರೇಣುಕಾ ಆರ್. ಬಡಿಗೇರ ಅವರಿಗೆ ಚೆಕ್ ನೀಡಿದ್ದು, ಆಕೆಯು ರೂ.1,50,000/-ಗಳನ್ನು ಆರೋಪಿಯ ಖಾತೆಗೆ ಫೋನ್ ಪೇ ಮಾಡಿದ್ದರೆಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ಚೆಕ್ಕನ್ನು ಭದ್ರತೆಗಾಗಿ ಆರೋಪಿಯು ನನ್ನ ನಾದಿನಿಯಾದ ಶ್ರೀಮತಿ ರೇಣುಕಾ ಆರ್. ಬಡಿಗೇರ ಅವರಿಗೆ ನೀಡಿದ್ದರು ಎಂದರೆ ಸರಿಯಲ್ಲ.

13) ದಿನಾಂಕ 18.08.2021 ರಂದು ಆರೋಪಿ ಮತ್ತು ಶ್ರೀಮತಿ ರೇಣುಕಾ ಆರ್. ಬಡಿಗೇರ ಅವರು ಪರಸ್ಪರ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ ಆರೋಪಿಯು ಆಕೆಗೆ ಹಣವನ್ನು ಮರುಪಾವತಿ

ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಚೆಕ್ಕನ್ನು ವಾಪಸ್ ಮಾಡುವಂತೆ ತಿಳಿಸಿ ನಿ.ಪಿ.1 ಚೆಕ್ಕನ್ನು ನನ್ನ ತಮ್ಮನು ನನಗೆ ನೀಡಿದ್ದು, ಅದನ್ನು ನಾನು ದುರುಪಯೋಗಪಡಿಸಿಕೊಂಡು ಪ್ರಸ್ತುತ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಮ್ಮನು ನನಗೆ ಎರಡು ಚೆಕ್ಕುಗಳನ್ನು ಆರೋಪಿಗೆ ನೀಡುವಂತೆ ನನಗೆ ಕೊಟ್ಟಿದ್ದು, ಅದರಲ್ಲಿ ಒಂದನ್ನು ನಾನು ದುರುಪಯೋಗಪಡಿಸಿಕೊಂಡು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

14) ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರವಾಗಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ದೇವರಾಜು ಹೆಚ್.ಆರ್.)**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.